ಸರಬರಾಜು ಮಾಡುವ ಗೋಧಿಯ ಬೆಲೆಯನ್ನು ೧೮೫ರಿಂದ ೨೮೮ಕ್ಕೆ ಹೆಚ್ಚು ಮಾಡಿತು. ಇಲ್ಲಿ ನಾವು ಹಲ್ಲಿಂಗ್ ಮತ್ತು ಸಾಗಾಣಿಕೆ ದರವನ್ನೆಲ್ಲಾ ಲೆಕ್ಕ ಹಾಕಿ ಆದಷ್ಟೂ ಕಡಿಮೆ ಪಿರ್ಚನ್ನು ತೋರಿಸಿ ದರವನ್ನು ನಿಗದಿ ಮಾಡಿದ್ದೇವೆ. ಆದ್ದರಿಂದ ಇಲ್ಲಿ ಅಂತಹ ಹೊರೆ ಏನೂ ಇಲ್ಲ.

ಶ್ರೀ ಪಿ. ರಾಮದೇವ್.—ಇಲ್ಲಿ ದಿನಾಂಕ ೧೫-೬-೧೯೬೩ರಂದು ಸರ್ಕಾರದ ಉಗ್ರಾಣದಲ್ಲಿ ದಾಸ್ತಾನು ಇರಲಿಲ್ಲವೆಂದು ಹೇಳಿದ್ದೀರಿ. ಆದರೆ ಅದೇದಿನ ಭಾರತ ಸರ್ಕಾರದ ಎಫ್.ಸಿ.ಐ. ಗೋಡೋನ್‌ನಲ್ಲಿದ್ದ ೨೨ ಸಾವಿರ ಟನ್ ಗೋಧಿಯನ್ನು ಹಿಟ್ಟಿನ ಗಿರಣಿಗಳಿಗೆ ಹಳೆಯ ದರದಲ್ಲಿ ಕೊಟ್ಟಿದ್ದರಿಂದ ಗಿರಣಿಗಳವರು ೫೫ ಲಕ್ಷ ರೂಪಾಯಿಗಳಷ್ಟು ಲಾಭ ಪಡೆದಿದ್ದಾರೆ. ಇದನ್ನು ಕೇಂದ್ರ ಸರ್ಕಾರಕ್ಕೆ ತಾವು ಬರೆದು ಈ ಹಗರಣ ಹಾಗೂ ಈ ಮೋಸವನ್ನು ಅವರ ಗಮನಕ್ಕೆ ತರುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.—ಎಫ್.ಸಿ.ಐ.ನವರು ಗೋಧಿಯನ್ನು ರೋಲರ್ ಫ್ಲೋರ್ ಮಿಲ್‌ಗಳಿಗೆ ನೇರವಾಗಿ ಕೊಡುತ್ತಾರೆ. ಇದರಲ್ಲಿರುವಂತಹ ಲೋಪದೋಷಗಳು ಏನೇ ಇರಲಿ, ಬೆಲೆ ಹೆಚ್ಚಿರುವುದನ್ನು ಮಾತ್ರ ನಾವು ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತೇವೆ. ಸಾರ್ವಜನಿಕ ವಿತರಣೆಗೆ ಕೊಟ್ಟ ಗೋಧಿಯ ಬೆಲೆ ಏರಿಕೆ ಏನಿದೆ, ಈ ಬಗ್ಗೆ ಅವರು ೨೪ ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ. ಇದನ್ನು ನಮ್ಮ ಸರ್ಕಾರದ ಟ್ರಿಜರಿಗೆ ತುಂಬಬೇಕೆಂದು ಹೇಳಿದಾಗ ಅವರು ಹೈಕೋರ್ಟಿಗೆ ಹೋದರು. ಅವರು ಈಗ ಸ್ಟೇ ಕೊಟ್ಟಿದ್ದಾರೆ. ನಾವು ಗೌರ್ನಮೆಂಟ್ ಅಡ್ವೊಕೇಟ್ ಅವರನ್ನು ಹಾಕಿದ್ದೇವೆ. ಈ ಕೇಸ್ ಈಗ ಕೋರ್ಟಿನ ಮುಂದಿದೆ.

ಶಾಸಕರುಗಳಿಗೆ ಕನ್ನಡ ಬೆರಳಚ್ಚು ಯಂತ್ರಗಳ ಸರಬರಾಜು

೧೪೮ (೪೫೯) ಶ್ರೀ ಸುಧೀಂದ್ರರಾವ್ ಕಸಬೆ (ಕಲಮಾಲ).—ಮಾನ್ಯ ಯುವಜನ ಸೇವೆ ಹಾಗೂ ಕ್ರೀಡಾ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಶಾಸಕರಿಗೆ ಕನ್ನಡದಲ್ಲಿ ತಮ್ಮ ಪತ್ರ ವ್ಯವಹಾರವನ್ನು ನಡೆಸಲು ಕನ್ನಡ ಕಿರುಬೆರಳಚ್ಚು ಯಂತ್ರವನ್ನು ಹಣ ಪಡೆದು ಒದಗಿಸುವ ಪ್ರಸ್ತಾವನೆಯೇನಾದರೂ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಡಾ।। ಜೀವರಾಜ ಆಳ್ವ (ಕನ್ನಡ ಮತ್ತು ಸಂಸ್ಕೃತಿ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ನಿವೃತ್ತ ಸರ್ಕಾರಿ ನೌಕರರ ನಿವೃತ್ತಿ ವೇತನವನ್ನು ಇತ್ಯರ್ಥ ಮಾಡುವುದು

೧೪೯ (೪೪೬) ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ನಿವೃತ್ತ ಸರ್ಕಾರಿ ನೌಕರರ ನಿವೃತ್ತಿ ವೇತನವನ್ನು ಎಷ್ಟು ದಿನಗಳೊಳಗಾಗಿ ಮಂಜೂರು ಮಾಡಬೇಕೆಂಬ ನಿಯಮವಿದೆ. ಹಾಗೂ ಅದನ್ನು ಸಮರ್ಪಕವಾಗಿ ಪಾಲಿಸಲಾಗುತ್ತಿದೆಯೆ?

ಆ) ೧೯೬೩ರ ಆರಂಭದಲ್ಲಿ ನಿವೃತ್ತಿ ವೇತನ ಮಂಜೂರಾಗದಿರುವ ಪ್ರಕರಣಗಳ ಸಂಖ್ಯೆ ಎಷ್ಟು ಹಾಗೂ ಸದರಿ ಸಾಲಿನಲ್ಲಿ ನಿವೃತ್ತಿ ವೇತನ ಮಂಜೂರಾತಿಯಾದ ಪ್ರಕರಣಗಳ ಸಂಖ್ಯೆ ಎಷ್ಟು?

ಇ) ೧೯೬೩ರ ಅಂತ್ಯದಲ್ಲಿ ಮಂಜೂರಾತಿ ಆಗದೆ ಉಳಿದಿರುವ ನಿವೃತ್ತಿ ವೇತನದ ಪ್ರಕರಣಗಳ ಸಂಖ್ಯೆ ಎಷ್ಟು? ಇವುಗಳಲ್ಲಿ ೩ ವರ್ಷಕ್ಕಿಂತ ಹೆಚ್ಚು ಕಾಲ ತೀರ್ಮಾನವಾಗದೆ ಉಳಿದಿರುವುವು, ೨ ವರ್ಷಕ್ಕಿಂತ ಹೆಚ್ಚಾಗಿ, ೧ ವರ್ಷಕ್ಕಿಂತ ಹೆಚ್ಚಾಗಿ, ೬ ತಿಂಗಳಿಗಿಂತ ಹೆಚ್ಚಾಗಿ ತೀರ್ಮಾನವಾಗದೇ ಉಳಿದಿರುವ ನಿವೃತ್ತಿ ವೇತನದ ಪ್ರಕರಣಗಳ ಸಂಖ್ಯೆ ಎಷ್ಟು?

ಈ) ಈ ರೀತಿ ವಿಳಂಬಕ್ಕೆ ಕಾರಣಗಳೇನು ಹಾಗೂ ಶೀಘ್ರವಾಗಿ ಮಂಜೂರು ಮಾಡಲು ಕೈಕೊಂಡ ಅಥವಾ ಕೈಕೊಳ್ಳಲಾಗುವ ಕ್ರಮಗಳೇನು?